## Training cum Demonstration on Biocontrol Strategies for Management of Invasive Whiteflies in Coconut at Nagathihalli, Mandya District held on 7th October 2022 at Nagathihalli, Mandya district, Karnataka.

# ಬಿಳಿ ನೊಣದ ಜೈವಿಕ ನಿಯಂತ್ರಣ ತರಬೇತಿ



ಬಿಂಡಿಗನವಿಲೆ ಹೋಬಳಿಯ ನಾಗತಿಹಳ್ಳಿ ಗ್ರಾಮದಲ್ಲಿ ತೆಂಗಿನ ಫಸಲಿಗೆ ಬಿಳಿ ನೊಣವನ್ನು ನಿಯಂತ್ರಿಸುವ ಬಗ್ಗೆ ತರಬೇತಿ ನೀಡಲಾಯಿತು.

**ನಾಗಮಂಗಲ:** ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಎ.ನಾಗತಿಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಕೃಷಿ ಸಂಪನ್ಮೂಲ ಬ್ಯೂರೋ ಬೆಂಗಳೂರು, ತೋಟಗಾರಿಕೆ ಇಲಾಖೆ, ನಾಗತಿಹಳ್ಳಿ ರೈತ ಉತ್ಪಾದಕ ಸಂಸ್ಥೆಯಿಂದ ತೆಂಗಿನ ಬೆಳೆಯಲ್ಲಿ ಬಿಳಿ ನೊಣದ ಜೈವಿ ನಿಯಂತ್ರಣ ತರಬೇತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬ್ಯೂರೋ ಕೇಂದ್ರದ ನಿರ್ದೇಶಕ ಡಾ. ಸುಶೀಲ್, ರಾಸಾಯನಿಕ ಔಷಧಗಳ ಬಳಕೆಯಿಂದ ಉಪಯುಕ್ತ ಕೀಟಗಳು ನಾಶವಾಗುತ್ತಿರುವುದರ ಜೊತೆಗೆ ಪರಿಸರವೂ ಕೂಡ ವಿಷವಾಗುತ್ತಿದೆ. ಆದ್ದರಿಂದ ಜೈವಿಕ ನಿಯಂತ್ರಣ ಮೂಲಕ ನೀಡಿ ಕೀಟಗಳನ್ನು ನಿಯಂತ್ರಿಸಬೇಕೆಂದು ತಿಳಿಸಿದರು.

ನಂತರ ತೆಂಗಿನಕಾಯಿ ಬೆಳೆಯನ್ನು ಬಾಧಿಸುವ ಬಿಳಿ ನೊಣವನ್ನು ನಿಯಂತ್ರಿಸುವ ಬಗ್ಗೆ ತೋಟದಲ್ಲಿ ಪ್ರಾತ್ಯಕ್ಷಿಕೆ ಮಾಡುವ ಮೂಲಕ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತರಿಗೆ ಜೈವಿಕ ನಿಯಂತ್ರಕಗಳನ್ನು ವಿತರಿಸಲಾಯಿತು. ಸಭೆಯಲ್ಲಿ ತೋಟಗಾರಿಕೆ ಉಪ ನಿರ್ದೇಶಕ ಮಂಜುನಾಥ್, ಅರಮಾಯಿ, ನಾಗತಿಹಳ್ಳಿ ರೈತ ಉತ್ಪಾದಕ ಸಂಸ್ಥೆಯ ಅಧ್ಯಕ್ಷ ಎನ್.ಟಿ.ಸುಬ್ರಹ್ಮಣ್ಯ, ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಬ್ಯೂರೋ ಸಂಸ್ಥೆಯ ವಿಜ್ಞಾನಿಗಳಾದ ಡಾ. ಎನ್.ಶೈಲೇಶ್, ಡಾ. ಕಂದನ್ ಇದ್ದರು.

ವಿಶ್ವವಾಣಿ ಶ್ರೀನಿವಾಸ್

**Vishwavani newpaper on 08-10-2022**